ಅ.ದಾ.ನಂ.472/2012
ಪಿ.ಡಬ್ಲೂ.:1

**<u>ಸಾಕ್ಷಿಯನ್ನು ಇಂದು ದಿನಾಂಕಃ 21.11.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀಮತಿ. ಎಸ್ ಆರ್ ಜಿ , ವಕೀಲರಿಂದ 1 ಮತ್ತು 3 ನೇ ಪ್ರತಿವಾದಿ ಪರವಾಗಿ</u>**

1. ನಮ್ಮ ಮನೆತನದ ಮೂಲ ಪುರುಷ ಶಿವಲಿಂಗಯ್ಯ ಇರುತ್ತಾರೆ. ಶಿವಲಿಂಗಯ್ಯನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಶಿವಲಿಂಗಯ್ಯನಿಗೆ ಎಷ್ಟು ಜನ ಅಣ್ಣ ತಮ್ಮಂದಿರ ಬಗ್ಗೆ ನನಗೆ ಗೊತ್ತಿಲ್ಲ. ಶಿವಲಿಂಗಯ್ಯನ ಹೆಂಡತಿಯ ಹೆಸರು ಕಾಶೀಬಾಯಿ ಎಂದು ಇರುತ್ತದೆ. ಕಾಶೀಬಾಯಿಯನ್ನು ಬೇರೆ ಯಾವುದೇ ಹೆಸರಿನಿಂದ ಕರೆಯುವುದಿಲ್ಲ. ಶಿವಲಿಂಗಯ್ಯನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ, ಶಿವಯ್ಯ ಮತ್ತು ಸಿದ್ದಲಿಂಗವ್ವ ಇರುತ್ತಾರೆ. ನಾನು ನಮ್ಮ ವಕೀರಿಗೆ ಶಿವಯ್ಯನಿಗೆ ಶಿವಲಿಂಗವ್ವ ಎಂದು ಸಹೋದರಿ ಇರುವ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ. ನನ್ನ ತಂದೆ ಶಿವಯ್ಯನಿಗೆ ಇಬ್ಬರೂ ಹೆಂಡತಿಯರು ಇರುತ್ತಾರೆ. ನಾನು ನನ್ನ ತಂದೆಯ ಮೊದಲನೇ ಹೆಂಡತಿಯಾದ ಗುರುಬಾಯಿಯವರ ಮಗಳು ಇರುತ್ತೇನೆ. ನನ್ನ ತಂದೆಗೆ ಕಮಲಾಬಾಯಿ ಎಂದು ಎರಡನೇ ಹೆಂಡತಿ ಇದ್ದು, ಅವರಿಗೆ ಸುರೇಖಾ ಎಂಬ ಮಗಳು ಇರುತ್ತಾಳೆ. ಸದರಿ ಸುರೇಖಾರವರು ಜೀವಂತ ಇರುತ್ತಾರೆ.

2. ಶಿವಲಿಂಗವ್ವನಿಗೆ ಇಬ್ಬರೂ ಗಂಡು ಮಕ್ಕಳು ಅವರುಗಳೆಂದರೆ ನಿಂಗಯ್ಯ ಮತ್ತು ಶಿವಲಿಂಗಯ್ಯ ಇರುತ್ತಾರೆ. ನಾನು ನಮ್ಮ ವಕೀಲರಿಗೆ ಶಿವಲಿಂಗವ್ವನಿಗೆ ಸಿದ್ದಲಿಂಗಯ್ಯ ಎಂಬ ಮಗನು ಇದ್ದ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ. ಸಿದ್ದಲಿಂಗಯ್ಯ ಎನ್ನುವವರು ವಾದ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ನನ್ನ ಅತ್ತೆಯಾದ ಶಿವಲಿಂಗವ್ವನ ಮಕ್ಕಳು ಎಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಪುಣೆ ಮತ್ತು ಬಾಂಬೆ ಕಡೆ ಹೋಗಿರುತ್ತಾರೆ ಎಂದು ಹೇಳುತ್ತಾರೆ. ಶಿವಲಿಂಗವ್ವನ ಮಕ್ಕಳು ನಿರ್ಧಿಷ್ಟವಾಗಿ ಎಲ್ಲಿ ವಾಸವಾಗಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಶಿವಲಿಂಗವ್ವನ ಮಕ್ಕಳು ಈ ದಾವೆಯನ್ನು ದಾಖಲಿಸಿದ ನಂತರ ಪುಣೆ ಮತ್ತು ಬಾಂಬೆ ಕಡೆ

ಹೋಗಿರುತ್ತಾರೆ. ಸದರಿ ಶಿವಲಿಂಗವ್ವನ ಮಕ್ಕಳು ಬದುಕಿರುತ್ತಾರೋ ಅಥವಾ ಮೃತ ಪಟ್ಟಿರುತ್ತಾರೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

3. ಮೂಲ 1 ನೇ ಪ್ರತಿವಾದಿ ಯಾದ ದುಂಡಯ್ಯ ಮತ್ತು 2 ನೇ ಪ್ರತಿವಾದಿಯು ಸಿದ್ದಯ್ಯರವರು ಬದುಕಿರುತ್ತಾರೋ ಅಥವಾ ಮೃತಪಟ್ಟಿರುತ್ತಾರೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಮೃತ ಪಟ್ಟ ನಂತರ ಅವನ ಮಕ್ಕಳನ್ನು ವಾರಸಾ ತರಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಮತ್ತು ದುಂಡಯ್ಯ ಮತ್ತು ಅವನ ಮಕ್ಕಳ ಬಗ್ಗೆಯೂ ಸಹ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದುಂಡಯ್ಯ ಮತ್ತು ಅವನ ಹೆಂಡತಿ ಮಕ್ಕಳು ಎಲ್ಲಿ ವಾಸವಾಗಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ದುಂಡಯ್ಯನು ಮೂಲತಃ ಯಾವ ಊರಿನವರು ಎಂಬುದು ನನಗೆ ಗೊತ್ತಿಲ್ಲ. ದುಂಡಯ್ಯನು ಯಾವ ಉದ್ಯೋಗ ಮಾಡುತ್ತಿದ್ದನು ಎಂಬುದು ನನಗೆ ಗೊತ್ತಿಲ್ಲ.

4. ದಾವಾ ಆಸ್ತಿ ಸರ್ವೇ ನಂ.181 ಇರುತ್ತದೆ. ಸರ್ವೇ ನಂ.181 ರ ಮೂಲ ಸರ್ವೇ ನಂಬರ ಎಷ್ಟು ಇತ್ತು ಎಂಬುದು ನನಗೆ ಗೊತ್ತಿಲ್ಲ. ಸರ್ವೇ ನಂ.181 ರ ಒಟ್ಟು ವಿಸ್ತೀರ್ಣ 03 ಎಕರೆ 03 ಗುಂಟೆ ಇರುತ್ತದೆ. ಸಾಕ್ಷಿಯು ಮುಂದುವರೆದು ಮೊದಲಿನ ಎರಡು ಭಾಗಗಳು ಕೂಡಿ 03 ಎಕರೆ 03 ಗುಂಟೆ ಆಗಿರುತ್ತದೆ ಎಂದು ಹೇಳುತ್ತಾರೆ. ಮೊದಲಿನ ಎರಡು ಭಾಗಗಳಲ್ಲಿ ಒಂದೊಂದು ಭಾಗ ಎಷ್ಟು ವಿಸ್ತೀರ್ಣ ಇತ್ತು ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೇ ನಂ.181 ರಲ್ಲಿ ಎರಡು ಭಾಗಗಳ ವಿಸ್ತೀರ್ಣದ ಕುರಿತು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ಪರಮಾನಂದ ಗುಡಿಯವರು ಸೇರಿ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಪರಮಾನಂದ ಗುಡಿ ಕಮಿಟಿಯವರು ಎಂದರೆ ಬೊಮ್ಮನಹಳ್ಳಿ ಗ್ರಾಮದ ನಾನಾಗೌಡ ಮತ್ತು ಇತರೆ ಹತ್ತು ಮಂದಿಯರು ಎಂದರೆ ಸರಿ.

5. ಮೂಲ 1 ನೇ ಪ್ರತಿವಾದಿಯು ಅಸಲು ದಾವೆ ನಂ.291/2012 ರಂತೆ ನಾನಾಗೌಡ ಮತ್ತು ಇನ್ನೂ ಹತ್ತು ಜನರ ಮೇಲೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದ ಪ್ಯಾರಾ ನಂ.7 ರಲ್ಲಿ ನಾನಾಗೌಡ ಮತ್ತು ಇತರೆ ಹತ್ತು ಜನರ ಮೇಲೆ 1 ನೇ ಪ್ರತಿವಾದಿಯು ಅಸಲು ದಾವೆ ನಂ.291/2012 ರಂತೆ ದಾವೆಯನ್ನು ಸಲ್ಲಿಸಿರುವ ಬಗ್ಗೆ ನೀವು ನಿಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಮಾಹಿತಿ ನೀಡಿಲ್ಲ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**